ಪ್ರಶ್ನೆ : 188(625)

(ಶ್ರೀ ಆರ್.ವಿ. ದೇಶಪಾಂಡೆ ಅವರ ಪರವಾಗಿ ಶ್ರೀ ಶಿವಾನಂದ ಕೌಜಲಗಿ ಅವರು ಪ್ರಶ್ನೆ ಕೇಳಿದರು.)

ಅಂಬೇಡ್ಕರ್ ಜನ್ಮಶತಾಬ್ದಿಯ ಅಂಗವಾಗಿ ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರ ಏಳಿಗೆಗಾಗಿ ಕೈಗೊಂಡಿರುವ ಕೆಲಸಗಳ ಬಗ್ಗೆ)

625. ಶ್ರೀ ಶಿವಾನಂದ ಹೆಚ್. ಕಾಜಲಗಿ:– ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) ಇವರ ಪರವಾಗಿ ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಅಂಬೇಡ್ಕರ್ ಜನ್ಮಶತಾಬ್ದಿಯನ್ನು ಅರ್ಥಪೂರ್ಣವಾಗಿ ಆಚರಿಸುವ ಸಲುವಾಗಿ ರಾಜ್ಯ ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಜನರ ಏಳಿಗೆಗಾಗಿ ಯಾವುದಾದರು ವಿಶೇಷ ಕಾರ್ಯಕ್ರಮಗಳನ್ನು ರೂಪಿಸಲಾಗಿದೆಯೇ?

(ಆ) ಹಾಗಿದ್ದಲ್ಲಿ, ಆ ಕಾರ್ಯಕ್ರಮಗಳು ಯಾವುವು?

(ಇ) ಇದಕ್ಕಾಗಿ ಸರ್ಕಾರ ಇದುವರೆವಿಗೆ ಎಷ್ಟು ಹಣವನ್ನು ಖರ್ಚು ಮಾಡಲಿದೆ?

ಶ್ರೀ. ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು):–

(ಅ) ಡಾ : ಅಂಬೇಡ್ಕರ್‌ರವರ ಜನ್ಮಶತಮಾನೋತ್ಸವವನ್ನು ಆಚರಿಸಲು ಸಮಿತಿಯನ್ನು ರಚಿಸಲಾಗುತ್ತಿದೆ. ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದನ್ನು ಸಮಿತಿಯೇ ತೀರ್ಮಾನಿಸುವುದು.

(ಆ) ಸಮಿತಿ ಇದರ ಬಗ್ಗೆ ನಿರ್ಧರಿಸುವುದು.

(ಇ) ಉದ್ಭವಿಸುವುದಿಲ್ಲ..

ಶ್ರೀ ಶಿವಾನಂದ ಎಚ್. ಕೌಜಲಗಿ :– ಮಾನ್ಯ ಉಪಾಧ್ಯಕ್ಷರೇ, ನಮ್ಮ ಪ್ರಶ್ನೆ ಇರುವುದು ಡಾ. ಅಂಬೇಡ್ಕರ್ ಜನ್ಮಶತಾಬ್ದಿಯನ್ನು ಅರ್ಥಪೂರ್ಣವಾಗಿ ಆಚರಿಸುವ ಸಲುವಾಗಿ ರಾಜ್ಯ ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಜನರ ಏಳಿಗೆಗಾಗಿ ಯಾವುದಾದರೂ ವಿಶೇಷ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆಯೇ? ಎಂದು. ಇವತ್ತಿನ ದಿವಸ ಡಾ: ಅಂಬೇಡ್ಕರ್ ಜನ್ಮಶತಾಬ್ದಿಯನ್ನು 14 ಏಪ್ರಿಲ್ 1989ನೇ ಇಸವಿಯಿಂದ ಒಂದು ವರ್ಷಕ್ಕೆ ಆಚರಿಸಬೇಕೆಂದು ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದಲ್ಲಿ ಒಂದು ನಿರ್ಣಯವಾಗಿದೆ. ಅದರ ಸಲುವಾಗಿ ಏನು ಉತ್ತರ ಕೊಟ್ಟಿದ್ದಾರೆ ಎಂದರೆ ಡಾ: ಅಂಬೇಡ್ಕರ್ ಅವರ ಜನ್ಮಶತಮಾನೋತ್ಸವವನ್ನು ಆಚರಿಸಲು ಸಮಿತಿಯನ್ನು ರಚಿಸಲಾಗುತ್ತಿದೆ ಎಂದು. ಇವತ್ತು ಒಂಬತ್ತು ತಿಂಗಳು ಕಳೆದು ಮೂರು ತಿಂಗಳು ಮಾತ್ರ ಉಳಿದಿದೆ. ಮೂರು ತಿಂಗಳು ಮಾತ್ರ ಉಳಿದರೂ ಕೂಡ ಇನ್ನು ಸಹ ಸಮಿತಿಯನ್ನು ರಚಿಸಲಾಗಿಲ್ಲ. ಸಮಿತಿ ರಚನೆಯಾದ ನಂತರ ಮುಂದಿನ ಕಾರ್ಯಕ್ರಮ ಕೈಗೊಳ್ಳುತ್ತೇವೆ ಎಂದು ಹೇಳಿದ್ದಾರೆ. ಸಮಿತಿಯನ್ನು ಇನ್ನು ಎರಡು ದಿನಗಳಲ್ಲಿ ರಚಿಸುತ್ತೀರಾ? ಅದರ ಜೊತೆಗೆ ಎಸ್‌ಸಿ ಮತ್ತು ಎಸ್‌ಟಿ ಜನರ ಸಲುವಾಗಿ ಯಾವ್ಯಾವ ಕಾರ್ಯಕ್ರಮ ಕೈಗೊಳ್ಳುತ್ತೀರಿ? ಇದನ್ನು ಹೇಳುತ್ತೀರಾ?

ಶ್ರೀ ಬಿ. ಶಿವಣ್ಣ :– ನಾನು ಮೊದಲೇ ಹೇಳಿದ ಪ್ರಕಾರ ಡಾ: ಬಾಬಾಸಾಹೇಬ ಅಂಬೇಡ್ಕರ್ ಅವರ ಜನ್ಮಶತಮಾನೋತ್ಸವವನ್ನು ಏಪ್ರಿಲ್‌ನಲ್ಲಿ ಮಾಡಿದನಂತರ ಸಾಕಷ್ಟು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಪ್ರೋಗ್ರಾಮ್ ಮಾಡಿದ್ದೇವೆ. ಈಗ ಸೆಂಟಿನರಿ ಸೆಲಬ್ರೇಶನ್ ಕಮಿಟಿಗೆ ನಾಮಿನೇಶನ್ಸ್ ಮಾಡಬೇಕಾಗಿದೆ. ಇನ್ನು ಎರಡು ದಿವಸಗಳೊಳಗೆ ಸಮಿತಿ ಅಸ್ತಿತ್ವಕ್ಕೆ ಬರುತ್ತದೆ. ಇದು ಎರಡು ತಿಂಗಳ ಮೊದಲೇ ಆಗಬೇಕಿತ್ತು. ಆದರೆ ರಾಜಕೀಯ ವಿದ್ಯಾಮಾನಗಳಿಂದಾಗಿ ಇದು ಮುಂದಕ್ಕೆ ಹೋಗಿದೆ. ಇನ್ನು ಎರಡು ದಿವಸಗಳಲ್ಲಿ ಈ ಕಮಿಟಿ ರಚನೆಯಾದ ನಂತರ ಕಮಿಟಿ ಮೀಟಿಂಗ್ ಕರೆದು ಸಾಕಷ್ಟು ಪ್ರೋಗ್ರಾಮ್‌ಗಳನ್ನು ನಾವು ತೆಗೆದುಕೊಳ್ಳುತ್ತಿದ್ದೇವೆ. ತಮಗೆ ಹೇಳಬೇಕೆಂದರೆ ಎಸ್‌ಸಿ:ಎಸ್‌ಟಿ ಜನರಿಗಾಗಿ ಒಂದು ಲಕ್ಷ ಮನೆಗಳನ್ನು...

ಶ್ರೀ ಶಿವಾನಂದ ಎಚ್. ಕೌಜಲಗಿ :– ನಮ್ಮ ಸರ್ಕಾರ ಭಾರತರತ್ನ ಪ್ರಶಸ್ತಿಯನ್ನು ಅವರಿಗೆ ಕೊಟ್ಟಿದೆ. ನಿಮ್ಮ ಸರ್ಕಾರ ಏನು ಮಾಡಿದೆ? ಒಂದು ಕಾರ್ಯಕ್ರಮವನ್ನಾದರೂ ಹೇಳುತ್ತೀರಾ? ಒಂಬತ್ತು ತಿಂಗಳು ಆದರೂ ಸಹಿತ ಇವತ್ತಿನ ತನಕ ಒಂದು ಕಮಿಟಿ ಸಹ ಆಗಿಲ್ಲ. ಈ ಒಂಬತ್ತು ತಿಂಗಳ ಒಳಗೆ ಡಾ:ಅಂಬೇಡ್ಕರ್ ಶತಮಾನೋತ್ಸವ ಸಲುವಾಗಿ ಒಂದು ಕೆಲಸವನ್ನಾದರೂ ಮಾಡಿದ್ದೇವೆ ಎಂದು ಹೇಳುತ್ತೀರಾ? ಆಗ ನಾನು ಹೇಳಿದ್ದಕ್ಕೂ ಒಂದು ಅರ್ಥ ಬರುತ್ತದೆ. ಎಸ್‌ಸಿ : ಎಸ್‌ಟಿ ಹಾಸ್ಟೆಲ್‌ಗಳನ್ನು ಕೊಟ್ಟಿದ್ದೇವೆ ಎಂದು ಹೇಳುತ್ತೀರಿ. ಅಲ್ಲಿ ಹುಡುಗರಿಗೆ ಕೊಡುತ್ತಿರುವುದು 20 ರೂಪಾಯಿ. ಮೂರು ತಿಂಗಳಿಗೊಮ್ಮೆ ಅವರು ತಲೆಕೂದಲು ಕತ್ತರಿಸಿಕೊಳ್ಳಬೇಕು...

ಶ್ರೀ ಎಂ.ಪಿ. ವೆಂಕಟೇಶ್ :– ಮಂತ್ರಿಗಳ ಉತ್ತರ ಸೂಕ್ತವಾಗಿಲ್ಲ.

(ಗೊಂದಲ)

ಉಪಾಧ್ಯಕ್ಷರು :– ಎಲ್ಲರೂ ಒಟ್ಟಿಗೆ ಮಾತನಾಡಿದರೆ ಹೇಗೆ?

ಶ್ರೀ ಎಂ. ಮಹದೇವ್ :– ನಮ್ಮ ಸಚಿವರು ಬಹಳ ಒಳ್ಳೆಯವರು. ಅವರನ್ನು ಯಾಕೆ ಹೀಗೆ ಗೋಳುಹೊಯ್ದುಕೊಳ್ಳುತ್ತೀರಿ? ಅವರು ಉತ್ತರ ಕೊಡುತ್ತಾರೆ, ಇರಿ.

ಶ್ರೀ ಎಂ.ಪಿ. ವೆಂಕಟೇಶ್ :– ಇನ್ನು ಸ್ವಲ್ಪ ದಿವಸಗಳಲ್ಲೇ ತಾವು ಇಲ್ಲಿ ವಿರೋಧ ಪಕ್ಷದ ಜಾಗದಲ್ಲಿ ಕುಳಿತುಕೊಳ್ಳುತ್ತೀರಲ್ಲ, ಆಗ ನೀವು ಸಹ ಇದೇ ರೀತಿ ಶುರುಮಾಡುತ್ತೀರಿ.

ಶ್ರೀ ಶಿವಾನಂದ ಎಚ್. ಕೌಜಲಗಿ :– ತಾವು ಡಾ: ಅಂಬೇಡ್ಕರ್ ಜನ್ಮಶತಾಬ್ದಿಯಲ್ಲಿ ಯಾವ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಕೊಂಡಿದ್ದೀರಿ? ಇದಕ್ಕೆ ಉತ್ತರವನ್ನು ಹೇಳುತ್ತೀರಾ?

SRI. SUBHASH S. JOSHI:- Madam, the birth centenary of Dr.Ambedkar has been started from 14th April, 1989. Still, the committee is not constituted so far. It is going to be completed on 14th April, 1990. This is the Dr.Ambedkar's birth centenary year and the Govt. is silent about it. If this is the attitude of honouring a great man of India, then we must feel sorry for the Government.

ಶ್ರೀ ಬಿ. ಶಿವಣ್ಣ :– ನನಗೆ ಸಂತೋಷ ಏನೆಂದರೆ, ಮಾನ್ಯ ಕೌಜಲಗಿಯವರಿಗೆ, ಇಷ್ಟು ಅಭಿಮಾನ, ಪ್ರೇಮ ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಬಗ್ಗೆ ಮತ್ತು ಷೆಡ್ಯೂಲ್ಡ್ ಕ್ಯಾಸ್ಟ್ ಬಗ್ಗೆ ಇದೆಯೆಂದು ನನಗೆ ಸಂತೋಷವಾಗುತ್ತಿದೆ.

(ಗೊಂದಲ)

ಶ್ರೀ ಎಸ್.ಹೆಚ್. ಕೌಜಲಗಿ :– ನೀವು ಅಧಿಕಾರಕ್ಕೆ ಬಂದು 9 ತಿಂಗಳ ಮೇಲಾಗಿದೆ, ನೀವು ಇದುವರೆಗೂ ಏನು ಮಾಡಿದ್ದೀರಿ....

ಶ್ರೀ ಎಂ.ಪಿ. ವೆಂಕಟೇಶ್ :– ಸದಸ್ಯರಿಗೆ ತೊಂದರೆ ಇದೆ, ವಿರೋಧಪಕ್ಷದಲ್ಲಿ ನಾವಿಬ್ಬರೇ ಇದ್ದೇವೆ, ಕೌಜಲಗಿಯವರೂ ಮಾತನಾಡಬೇಕು, ಸಿದ್ಧರವರೂ ಮಾತನಾಡಬೇಕು. ಎಸ್.ಸಿ.ಎಸ್.ಟಿ. ಯವರ ಮತ ಹೆಚ್ಚಿಗೆ ಬರುವುದು ಕಾಂಗ್ರೆಸ್ಸಿಗೆ, ಅವರು ಮತವನ್ನು ತೆಗೆದುಕೊಂಡು ಬಂದಿದ್ದಾರೆ. ಮಂತ್ರಿಗಳು ಅಧಿಕಾರಕ್ಕೆ ಬರುವ ಮೊದಲು ಷೆಡ್ಯೂಲ್ಡ್ ಕ್ಯಾಸ್ಟ್ ಬಗ್ಗೆ ನಾವೆಲ್ಲರೂ ಹೋರಾಟ ಮಾಡುತ್ತೇವೆಂದು ಹೇಳುತ್ತಾರೆ, ಅಧಿಕಾರಕ್ಕೆ ಬಂದಮೇಲೆ ಎಲ್ಲವನ್ನೂ ಮರೆತು ಬಿಡುತ್ತಾರೆ.

ಶ್ರೀ ಬಿ. ಶಿವಣ್ಣ :– ನಾವು ಕಮಿಟಿ ಮಾಡಿದ್ದೇವೆ, ಆದಷ್ಟು ತೀವ್ರ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ.

ಶ್ರೀ ಬಿ. ಹೆಚ್. ಬನ್ನಿಕೋಡ್ : ನೀವು ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಎಂಬುದನ್ನು ಹೇಳಿ...

ಶ್ರೀ ಎಂ.ಪಿ. ವೆಂಕಟೇಶ್ :– ಮಾನ್ಯ ಸಚಿವರು ಈ ಕಡೆ ಇದ್ದಾಗ ಹೋರಾಟ ಮಾಡುತ್ತಿದ್ದರು. ಮಾನ್ಯ ಶಿವಮೂರ್ತಿಯವರೂ ಕೂಡ ಈ ಭಾಗದಲ್ಲಿದ್ದಾಗ ಹೋರಾಟ ಮಾಡುತ್ತಿದ್ದರು.

ಶ್ರೀ ಕೆ. ಲಕ್ಕಪ್ಪ :– ಕ್ಯಾಬಿನೆಟ್ ಸಬ್ ಕಮಿಟಿ ಮಾಡಿ, ಪ್ರೋಗ್ರಾಂ ಮಾಡಿದ್ದೇವೆಂದು ಹೇಳಿದ್ದಾರೆ, ಈ ರೀತಿ ಹೇಳಿದ ಮೇಲೆ, ಇನ್ನೇನು ಮಾಡಬೇಕು.

(ಗೊಂದಲ)

ಶ್ರೀ ಎಸ್.ಹೆಚ್. ಕೌಜಲಗಿ :– ಇದಕ್ಕಾಗಿ ಸರ್ಕಾರ ಇದುವರೆವಿಗೆ ಎಷ್ಟು ಹಣವನ್ನು ಖರ್ಚು ಮಾಡಿದೆ ಎಂದು ಕೇಳಿದ್ದಕ್ಕೆ, "ಉದ್ಭವಿಸುವುದಿಲ್ಲ" ಎಂದು ಉತ್ತರ ಹೇಳಿದ್ದಾರೆ. ಇವರು ಯಾವಾಗಲೂ ಎಸ್.ಸಿ.ಎಸ್.ಟಿ ಎಂದು ಹೇಳುತ್ತಾರೆ...

ಶ್ರೀ ಆರ್. ಧರ್ಮಸಿಂಗ್ :– ಈಗಾಗಲೇ ಸಂಬಂಧಪಟ್ಟ ಮಂತ್ರಿಗಳು ಇದರ ಬಗ್ಗೆ ಉತ್ತರ ಕೊಟ್ಟಿದ್ದಾರೆ. ಮೊನ್ನೆ 28ನೇ ತಾರೀಖಿನ ದಿವಸ ಸಂಪುಟದ ಸಭೆಯಲ್ಲಿ ಅಂಬೇಡ್ಕರ್ ಜನ್ಮಶತಾಬ್ದಿ ಬಗ್ಗೆ ಜನರ ನಿರೀಕ್ಷಣೆಗೆ ಮೀರಿ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದೂ, ಅದಕ್ಕೆ ಇಷ್ಟು ಹಣವನ್ನು ಕೊಡಬೇಕೆಂದು ತೀರ್ಮಾನ ತೆಗೆದುಕೊಂಡಿದೆ. ಮತ್ತು ಈಗಾಗಲೇ ಕ್ಯಾಬಿನೆಟ್ ಸಬ್‌ಕಮಿಟಿಯನ್ನು ರಚನೆ ಮಾಡಲಾಗಿದೆ, ಅವರು ಏನು ಹೇಳುತ್ತಿದ್ದಾರೆ, ಕಾಂಗ್ರೇಸ್ ಪಕ್ಷ, ಅಂಬೇಡ್ಕರ್‌ರವರ ಬಗ್ಗೆ ಹೆಚ್ಚಿನ ಕಾರ್ಯ ಕ್ರಮಹಾಕಿಕೊಂಡಿಲ್ಲವೆಂದು ಏನು ಅವರ ಮನಸ್ಸಿನ ಕಳವಳ ಇದೆ, ಅವರ ನಿರೀಕ್ಷಣೆಗೂ ಮೀರಿ, ಪರಿಣಾಮಕಾರಿ ಕಾರ್ಯಕ್ರಮಗಳನ್ನು ಸರ್ಕಾರ ತೀವ್ರತರವಾಗಿ, ಬಹಳ ಶೀಘ್ರದಲ್ಲಿ ಹಾಕಿಕೊಂಡಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ಎಸ್.ಹೆಚ್. ಕೌಜಲಗಿ :– ಇದಕ್ಕಾಗಿ ಸರ್ಕಾರ ಇದುವರೆಗೆ ಎಷ್ಟು ಹಣವನ್ನು ಖರ್ಚು ಮಾಡಿದೆ ಎಂದು ಕೇಳಿದ್ದಕ್ಕೆ "ಉದ್ಭವಿಸುವುದಿಲ್ಲ" ಎಂದು ಹೇಳಿದ್ದಾರೆ. ಇದರ ಅರ್ಥ ಏನು?

ಶ್ರೀ ಬಿ. ಶಿವಣ್ಣ :– ಇನ್ನು ಎರಡು ಮೂರು ದಿವಸದಲ್ಲಿ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಮೇಲೆ ನಡೆದ ಹಲ್ಲೆಗಳು

620. ಶ್ರೀ. ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1990–91ರಲ್ಲಿ ರಾಜ್ಯದಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರ ಮೇಲೆ ಆಗಿರುವ ಹಲ್ಲೆಗಳ ಸಂಖ್ಯೆ ಎಷ್ಟು?

ಆ) ಇವುಗಳಲ್ಲಿ ಎಷ್ಟು ಪ್ರಕರಣಗಳಲ್ಲಿ ಕೇಸುಗಳನ್ನು ದಾಖಲು ಮಾಡಲಾಗಿದೆ?

ಇ) ಸಿ.ಆರ್.ಇ. ಸೆಲ್ ವಿಚಾರಣೆ ಮಾಡಿರುವ ಪ್ರಕರಣಗಳೆಷ್ಟು?

ಈ) ಸಿ.ಆರ್.ಇ. ಸೆಲ್ ಮುಂದೆ ಬಾಕಿ ಇರುವ ಪ್ರಕರಣಗಳೆಷ್ಟು ?

ಉ) ಸಿ.ಆರ್.ಇ. ಸೆಲ್‌ನಲ್ಲಿ ಸಿಬ್ಬಂದಿ ಕೊರತೆ ಇದೆಯೇ?

ಶ್ರೀ ಧರ್ಮಸಿಂಗ್ (ಗೃಹ ಸಚಿವರು):–

ಅ) 297 (1–1–90 ರಿಂದ 31–10–90ರವರೆಗೆ)

ಆ) ಈ ಎಲ್ಲಾ 297 ಪ್ರಕರಣಗಳಲ್ಲಿ ಮೊಕದ್ದಮೆ ದಾಖಲು ಮಾಡಲಾಗಿದೆ.

ಇ) ಸಿ.ಆರ್.ಇ. ಸೆಲ್ ಯಾವುದೇ ಪ್ರಕರಣವನ್ನು ತಾನಾಗಿಯೇ ನೋಂದಾಯಿಸಿಕೊಂಡು ವಿಚಾರಣೆ ಮಾಡುತ್ತಿಲ್ಲ. ಆದರೆ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಗಳ ಮೇಲಿನ ದೌರ್ಜನ್ಯ ಪ್ರಕರಣಗಳ ತನಿಖೆಯನ್ನು ಸ್ಥಳೀಯ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಅಥವಾ ಸರ್ಕಲ್ ಇನ್ಸ್‌ಪೆಕ್ಟರ್‌ರವರು ಪ್ರಕರಣದ ಗಂಭೀರತೆಯ ಆಧಾರದ ಮೇರೆಗೆ ತನಿಖೆಯನ್ನು ಕೈಗೊಳ್ಳುವರು. ಜಿಲ್ಲಾ ಪೋಲೀಸ್ ಅಧಿಕಾರಿಗಳು ಮತ್ತು ಪೋಲೀಸ್ ಕಮೀಷನರ್‌ಗಳು ಈ ಪ್ರಕರಣಗಳಲ್ಲಿ ನೋಂದಾಯಿಸಲ್ಪಟ್ಟ ಮೊಕದ್ದಮೆಗಳ ವಿವರಗಳನ್ನು ಸಿ.ಆರ್.ಇ. ಸೆಲ್‌ಗೆ